### ಜಾಗತಿಕ ಹೂಡಿಕೆದಾರರ ಸಮಾವೇಶ | ಸಮಗ್ರ ಸದೃಢ, ತಂತ್ರಜ್ಞಾನ ಆಧಾರಿತ ಭವಿಷ್ಯ ಮರುಕಲ್ಪಿಸಲು ಹೆಜ್ಜೆ

# ಉದ್ದಿಮೆ ಆರಂಭಿಸಲು ಸೂಕ್ತ ಸ್ಥಳ ಕರ್ನಾಟಕ



**ಶಾಲಿನಿ ರಜನೀಶ್**
**ಮುಖ್ಯ ಕಾರ್ಯದರ್ಶಿ,**
**ಕರ್ನಾಟಕ ಸರ್ಕಾರ**

ಕರ್ನಾಟಕ ಇಂದು ದೇಶದಲ್ಲಿಯೇ ಒಂದು ರಾಜ್ಯ ಹಲವು ಸಾಧ್ಯತೆಗಳ ವಿಶೇಷ ಸ್ಥಾನದಲಿದ್ದು, ಸಮಗ್ರ ಸದೃಢ ಮತ್ತು ತಂತ್ರಜ್ಞಾನ ಆಧಾರಿತ ಭವಿಷ್ಯವನ್ನು ಮರುಕಲ್ಪಿಸುವ ನಿಟ್ಟಿನಲ್ಲಿ ದೃಢ ಹಜ್ಜೆಗಳನ್ನು ಇರಿಸಿದೆ.

ದೇಶದ ಶೇ.40ರಷ್ಟು ಐ.ಟಿ ಮತ್ತು ತಂತ್ರಾಂಶದ ರಫ್ತು, ಶೇ.65ರಷ್ಟು ಏರೋಸ್ಪೇಸ್ ಮತ್ತು ರಕ್ಷಣಾ ಉತ್ಪಾದನೆ, ಶೇ.60ರಷ್ಟು ಬಯೋ ಟೆಕ್ನಾಲಜಿ ಉತ್ಪಾದನೆ ಹಾಗೂ ರಫ್ತು ಸಾಧಿಸುವ ಹಿರಿಮೆ ಕರ್ನಾಟಕ ರಾಜ್ಯದ ಕಿರೀಟಕ್ಕೆ ಸೇರಿದ್ದು, ವಿಶ್ವದ ನಕ್ಷೆಯಲ್ಲಿಯೂ ವಿಶಿಷ್ಟವಾಗಿ ಗುರುತಿಸಿಕೊಂಡಿದೆ.

ನಮ್ಮ ರಾಜ್ಯವು ಐಐಎಸ್ಸಿ, ಐಐಐಟಿ, ಐಐಎಂ ಮುಂತಾದ ವಿಶ್ವ ಪ್ರಸಿದ್ಧ ಸಂಸ್ಥೆಗಳನ್ನು ಹೊಂದಿದ್ದು, ವಿದ್ಯುತ್ ಚಾಲಿತ ವಾಹನಗಳಲ್ಲಿ ಹಾಗೂ ವಿಶ್ವ ವಿನೂತನ ಸೂಚ್ಯಂಕದಲ್ಲಿ ಪ್ರಥಮ ಸ್ಥಾನವನ್ನು ಹೊಂದಿದೆ. ಅಲ್ಲದೆ, 500 ಗ್ಲೋಬಲ್ ಸಾಮರ್ಥ್ಯ ಬಲವರ್ಧನೆ ಕೇಂದ್ರಗಳು ಹಾಗೂ 400 ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳನ್ನು ಪ್ರೋತ್ಸಾಹಿಸಿ ಇಂದು ಬೆಂಗಳೂರು ನಗರವು ಐಟಿಬಿಟಿ ಮತ್ತು ಸ್ಟಾರ್ಟ್‌ಅಪ್ ರಾಜಧಾನಿ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಇತ್ತೀಚೆಗೆ ಕ್ವಿನ್ ಸಿಟಿ (ಜ್ಞಾನ, ಯೋಗಕ್ಷೇಮ, ನಾವೀನ್ಯತೆ) ಮತ್ತು ಸ್ವಿಫ್ಟ್ ಸಿಟಿ (ಸ್ಟಾರ್ಟ್‌ಅಪ್, ಕೆಲಸದ ಜಾಗ, ನಾವೀನ್ಯತೆ, ಹಣಕಾಸು, ತಂತ್ರಜ್ಞಾನ) ಮೂಲಕ ಕೃತಕ ಬುದ್ಧಿಮತ್ತೆ, ಸೆಮಿ ಕಂಡಕ್ಟರ್, ಭವಿಷ್ಯದ ಚಲನಶೀಲತೆ ಮತ್ತು ಜೀವನ ವಿಜ್ಞಾನ ಕ್ಷೇತ್ರಗಳಲ್ಲಿ ವಿಶ್ವನೇತೃತ್ವವನ್ನು ಹೊಂದಲು ರಾಜ್ಯ ಸನ್ನದ್ಧವಾಗಿದೆ. ಇದರ ಜೊತೆಗೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿ 'ಏರೋ ಸಿಟಿ' ಮತ್ತು 'ಬೆಂಗಳೂರು ಸಿಗ್ನೇಚರ್ ಪಾರ್ಕ್'ವನ್ನು ಅಭಿವೃದ್ಧಿಪಡಿ ಸಲಾಗಿದೆ. ಮುಂದಿನ ದಿನಗಳಲ್ಲಿ ಮೆಡಿಕಲ್ ಟೂರಿಸಂ, ಎಐ ಪಾರ್ಕ್, ಜಿ.ಸಿ.ಸಿ, ಥೀಮ್ ಪಾರ್ಕ್ ಮತ್ತು ಸಾಂಸ್ಕೃತಿಕ ಕೇಂದ್ರಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಇಲ್ಲಿ ಲಭ್ಯವಾಗಲಿದೆ.

ಇನ್ವೆಸ್ಟ್
ಕರ್ನಾಟಕ
2025

## ವಿನೂತನ ಕೈಗಾರಿಕಾ ನೀತಿ

ಪ್ರಸ್ತುತ ರಾಜ್ಯದ ವಿನೂತನ ಕೈಗಾರಿಕಾ ನೀತಿ ಮೂಲಕ ರಾಜ್ಯವನ್ನು ಹಸಿರು ಉದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿ ತರುವ ಪ್ರಯತ್ನವನ್ನು ಸರ್ಕಾರ ಮಾಡಿದೆ. ಈ ನೀತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಇನ್ವೆಸ್ಟ್ ಕರ್ನಾಟಕ-2025 ಉದ್ಘಾಟನಾ ಸಮಾರಂಭದಲ್ಲಿ ಲೋಕಾರ್ಪಣೆ ಮಾಡಲಿದ್ದಾರೆ. ಈ ಮೂಲಕ ಅತೀ ಹೆಚ್ಚು ಉದ್ಯೋಗ ಸೃಜನೆ ಹಾಗೂ ಮೌಲ್ಯವರ್ಧನೆ ಸಾಧಿಸುವ ಮೂಲಕ ರಾಜ್ಯವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಲು ಆಶಿಸಲಾಗಿದೆ. ಜೊತೆಗೆ ಪ್ರಾದೇಶಿಕ ಅಭಿವೃದ್ಧಿಯನ್ನು ಸಾಧಿಸಲು 'ಬಿಯಾಂಡ್ ಬೆಂಗಳೂರು ಯೋಜನೆ' ಮೂಲಕ ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚಿನ ಪ್ರೋತ್ಸಾಹಕಗಳನ್ನು ನೀಡಲಾಗಿದೆ. ಈ ಪೈಕಿ 199 ಹಿಂದುಳಿದ ತಾಲೂಕುಗಳನ್ನು ಹಾಗೂ 2ನೇ ಮತ್ತು 3ನೇ ಸ್ತರದ ನಗರಗಳಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಉತ್ತೇಜಿಸಲು ಹೆಚ್ಚಿನ ಸಬ್ಸಿಡಿಗಳು ಮತ್ತು ತೆರಿಗೆ ವಿನಾಯಿತಿಗಳನ್ನು ಒದಗಿಸಲಾಗಿದೆ. ದೇವನಹಳ್ಳಿ ಮತ್ತು ಹರಳೂರಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ಕೈಗಾರಿಕಾ ಗುಂಪುಗಳು, ಧಾರವಾಡದ ಚಿಕ್ಕಮಲ್ಲಿಗವಾಡದಲ್ಲಿ ವಿದ್ಯುತ್ ಚಾಲಿತ ಉತ್ಪಾದನಾ ಗುಂಪುಗಳನ್ನು ಹಾಗೂ ಮೈಸೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಲೆಕ್ಟ್ರಾನಿಕ್ ಉತ್ಪಾದನೆಗಳನ್ನು ಉತ್ತೇಜಿಸಲು ಕ್ಲಸ್ಟರ್ ಬೀಜ ನಿಧಿ ಮೂಲಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳನ್ನು ಪ್ರೋತ್ಸಾಹಿಸಲಾಗುವುದು.

ಬೃಹತ್ ಕೈಗಾರಿಕೆಗಳಲ್ಲದೆ ಸಣ್ಣ ಕೈಗಾರಿಕೆಗಳಿಗೂ ಕೂಡ ಕೈಗಾರಿಕಾ ನೀತಿ ಮೂಲಕ ಆದ್ಯತೆ ನೀಡಲಾ ಗುತ್ತದೆ. ಉದಾಹರಣೆಗೆ, ವೆಂಚರೈಸ್ (VentuRISE) ಮತ್ತು ಎಸ್ಎಂಇ ಕನೆಕ್ಟ್-2025 ವೇದಿಕೆಗಳ ಮೂಲಕ ಸಣ್ಣ ಉದ್ಯಮಿಗಳಿಗೆ ಬಲವರ್ಧನೆ ಮಾಡಲಾಗುತ್ತದೆ. ಅಲ್ಲದೆ, ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತದೆ.




## 31 ಆತ್ಯಾಕರ್ಷಕ ಪ್ರವಾಸೀ ಕೇಂದ್ರ ಬಲವರ್ಧನೆ

ರಾಜ್ಯವು ಪ್ರವಾಸೋದ್ಯಮದಲ್ಲಿ ದೇಶದ ಪ್ರಥಮ ಮೂರು ರಾಜ್ಯಗಳಲ್ಲಿ ಒಂದಾಗಿರುತ್ತದೆ. ಈಗಾಗಲೇ, 'ಒಂದು ಜಿಲ್ಲೆ ಒಂದು ತಾಣ' ಕಾರ್ಯಕ್ರಮದ ಮೂಲಕ ರಾಜ್ಯದಲ್ಲಿ 31 ಆತ್ಯಾಕರ್ಷಕ ಪ್ರವಾಸೀ ಕೇಂದ್ರಗಳನ್ನು ಬಲವರ್ಧನೆಗೊಳಿಸಲಾಗುತ್ತದೆ. ಹೊಸ ಪ್ರವಾಸೋದ್ಯಮ ನೀತಿಯಂತೆ 2029ರೊಳಗೆ 48 ಕೋಟಿ ರಾಷ್ಟ್ರೀಯ ಪ್ರವಾಸಿಗರನ್ನು ಆಹ್ವಾನಿಸುವ ಗುರಿ ಇದೆ ಹಾಗೂ ಈ ಮೂಲಕ ಕನಿಷ್ಠ 1 ಲಕ್ಷ ಹೊಸ ಉದ್ಯೋಗಗಳನ್ನು ಸೃಜಿಸುವ ಉದ್ದೇಶವನ್ನು ಹೊಂದಿದೆ. ತನ್ಮೂಲಕ ಸುಮಾರು ₹8,000 ಕೋಟಿಯಷ್ಟು ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಇಲಾಖೆ ಸಿದ್ಧವಾಗಿದೆ.

ಸುಮಾರು 1,000 ಪಾರಂಪರಿಕ ಸ್ಮಾರಕಗಳು, 30 ಸಾಹಸ ಪ್ರವಾಸೀ ಸ್ಥಳಗಳು, 10 ಬೃಹತ್ ಪ್ರವಾಸೀ ಕೇಂದ್ರಗಳನ್ನು 2029 ರೊಳಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು. ಪ್ರವಾಸೋದ್ಯಮಕ್ಕೆ ಈಗಾಗಲೇ ಕೈಗಾರಿಕಾ ಸ್ಥಾನಮಾನ ನೀಡಲಾಗಿದ್ದು, ರಾಜ್ಯದ ಕೈಗಾರಿಕಾ ನೀತಿಯಲ್ಲಿ ಲಭ್ಯವಿರುವ ಎಲ್ಲಾ ರಿಯಾಯತಿಗಳು, ಪ್ರೋತ್ಸಾಹಕಗಳನ್ನು ಒದಗಿಸಲಾಗುತ್ತಿದೆ. ಮಾತ್ರವಲ್ಲ, ಪ್ರವಾಸಿಗರು ತಮ್ಮ ಔದ್ಯೋಗಿಕ ವ್ಯವಹಾರಗಳನ್ನು ಸಹ ಬೆಂಗಳೂರಿನಲ್ಲಿ ನಡೆಸಲು ಸಭೆಗಳು, ಪ್ರೋತ್ಸಾಹಗಳು, ಸಮ್ಮೇಳನಗಳು ಮತ್ತು ಪ್ರದರ್ಶನಗಳು (MICE) ಸಂಘಟನೆ ಮೂಲಕ ಹೆಚ್ಚಿನ ಪ್ರಚಾರವನ್ನು ನೀಡಲು ಕರ್ನಾಟಕ ಅಂತಾರಾಷ್ಟ್ರೀಯ ಪ್ರವಾಸಿ ಮೇಳ (KITE)-2025 ಅನ್ನು ದಿನಾಂಕ: 26, 27 ಮತ್ತು 28 ಫೆಬ್ರವರಿ, 2025ರಂದು ವಿಶೇಷ ಕಾರ್ಯಕ್ರಮವನ್ನು ನಡೆಸಲಾಗುವುದು.

## ಹನ್ನೆರಡು ದೇಶಗಳ ಭಾಗವಹಿಸುವಿಕೆ ಖಚಿತ

ಈಗಾಗಲೇ ವಾಣಿಜ್ಯ ಮತ್ತು ಕೈಗಾರಿಕೆ, ಸಣ್ಣ ಕೈಗಾರಿಕೆ, ಪ್ರವಾಸೋದ್ಯಮ, ಐ.ಟಿ.ಬಿ.ಟಿ ಇಲಾಖೆಗಳಿಂದ ಸುಮಾರು ತಂಡಗಳು ವಿವಿಧ ವಿದೇಶಿ ಪ್ರಚಾರ ಕೇಂದ್ರಗಳಲ್ಲಿ ಭಾಗವಹಿಸಿ ಇನ್ವೆಸ್ಟ್ ಕರ್ನಾಟಕ-2025ಗೆ ಬರಮಾಡಲು ಪ್ರಯತ್ನಿಸಿರುತ್ತಾರೆ. ಸುಮಾರು 12 ದೇಶಗಳಾದ ಫ್ರಾನ್ಸ್, ನೆದರ್ಲ್ಯಾಂಡ್ಸ್, ಜಪಾನ್, ಥೈಲ್ಯಾಂಡ್, ಮಲೇಶಿಯಾ, ಜರ್ಮನಿ, ದಕ್ಷಿಣ ಕೋರಿಯಾ, ಇಸ್ರೇಲ್, ನಾರ್ವೆ, ತೈವಾನ್, ಡೆನ್ಮಾರ್ಕ್ ಹಾಗೂ ಸ್ವಿಟ್ಜರ್‌ಲ್ಯಾಂಡ್ ಇವುಗಳ ಭಾಗವಹಿಸುವಿಕೆ ಖಚಿತವಾಗಿದೆ.

ಗ್ಲೋಬಲ್ ಇನ್ವೆಸ್ಟರ್ ಮೀಟ್ 2000 (5-6 ಜೂನ್) ರಲ್ಲಿ 254 ಒಡಂಬಡಿಕೆ ಮೂಲಕ ₹27,160 ಕೋಟಿ ಒಡಂಬಡಿಕೆ ದಾಖಲಾಗಿದ್ದು, 2010ರಲ್ಲಿ (4-5 ಜೂನ್) 389 ಘಟಕಗಳು ಹಾಗೂ ₹3,92,768 ಕೋಟಿ ಒಡಂಬಡಿಕೆಗಳು, 2016 (3-5 ಫೆಬ್ರವರಿ)ರಲ್ಲಿ 1,202 ಘಟಕಗಳು, ₹3,05,584 ಕೋಟಿ ಒಡಂಬಡಿಕೆಗಳು ಹಾಗೂ 2022 ರಲ್ಲಿ 751 ಘಟಕಗಳು, ₹6,77,068 ಒಡಂಬಡಿಕೆಗಳು ಆಗಿರುತ್ತವೆ. ಈ ವರ್ಷದಲ್ಲಿ ₹10 ಲಕ್ಷ ಕೋಟಿ ಮೊತ್ತದ ಒಡಂಬಡಿಕೆಗಳನ್ನು ನಿರೀಕ್ಷಿಸಲಾಗಿದೆ.

## ಮುಖ್ಯಮಂತ್ರಿಗಳಿಂದ ಪೋರ್ಟಲ್ ಉದ್ಘಾಟನೆ

ಹೂಡಿಕೆದಾರ ಸ್ನೇಹಿ ರಾಜ್ಯವಾಗಿರುವ ಕರ್ನಾಟಕ, ಹೂಡಿಕೆದಾರರಿಗೆ ವ್ಯವಹಾರಗಳನ್ನು ಇನ್ನಷ್ಟು ಸರಳೀಕೃತಗೊಳಿಸಲು ಮಹತ್ವದ ತಂತ್ರಜ್ಞಾನ ಆಧಾರಿತ ಬದಲಾವಣೆಗಳನ್ನು ಕಾಲಕಾಲಕ್ಕೆ ಅಳವಡಿಸಿಕೊಳ್ಳುತ್ತಾ ಬಂದಿದೆ. ಇದೇ ಹಾದಿಯಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯನ್ನು ರಾಜ್ಯ ದಾಖಲಿಸಲಿದೆ.

ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾದ ಏಕ ಗವಾಕ್ಷಿ ಸಮಿತಿಯಲ್ಲಿ ₹500 ಕೋಟಿಗಿಂತ ಹೆಚ್ಚಿನ ಮೊತ್ತದ ಎಲ್ಲಾ ಯೋಜನೆಗಳನ್ನು ವಿಲೇವಾರಿಗೊಳಿಸಲಾಗಿದೆ. ಈ ಸಂಬಂಧ ಅರ್ಜಿಯನ್ನು ಸ್ವೀಕರಿಸಿದ ನಂತರ ವಿವಿಧ ಇಲಾಖೆಗಳು ಕಾಲಮಿತಿಯಲ್ಲಿ ಅನುಮತಿಗಳನ್ನು ನೀಡಲು ಎಲ್ಲಾ ಹೂಡಿಕೆದಾರರಿಗೆ ಒಂದೇ ಸಮಗ್ರ ಆನ್‌ಲೈನ್ ವೇದಿಕೆ ಲಭ್ಯವಾಗುವಂತೆ ಖಚಿತಪಡಿಸಲಾಗಿದೆ. ಈ ಹೊಸ ಪೋರ್ಟಲ್ ಅನ್ನು ಉದ್ಘಾಟನಾ ಕಾರ್ಯಕ್ರಮದಲ್ಲಿ ಚಾಲನೆ ನೀಡಲಾಗುತ್ತಿದೆ. ಇದು ಕರ್ನಾಟಕದಲ್ಲಿ ಹೂಡಿಕೆದಾರ ಸ್ನೇಹಿ, ಸೌಹಾರ್ದಯುತ ಸಮರ್ಥ ಆಡಳಿತವನ್ನು ರಚಿಸುವಲ್ಲಿ ಸಹಕಾರಿಯಾಗುತ್ತದೆ.

ಈ ಉದ್ಯೋಗದ ಹಬ್ಬವು ರಾಜ್ಯದ ಎಲ್ಲಾ ನಾಗರಿಕರು, ಉದ್ಯಮಿಗಳು, ಹೂಡಿಕೆದಾರರು ಮತ್ತು ಎಲ್ಲರ ಸಹಯೋಗದಿಂದ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

### ಪ್ರವಾಸೋದ್ಯಮ ಬಂಡವಾಳ ಹೂಡಿಕೆದಾರರಿಗೆ ಅವಕಾಶ

ರಾಜ್ಯವು 320 ಕಿ.ಮೀ. ಕರಾವಳಿ ಪ್ರದೇಶವನ್ನು ಹೊಂದಿದ್ದು ಕರಾವಳಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು. ಇದಕ್ಕಾಗಿ ಈಗಾಗಲೇ ಹೊಸ ಕರಾವಳಿ ನಿಯಂತ್ರಣ ವಲಯ ನಿಯಮಗಳನ್ನು ಸಿದ್ಧಪಡಿಸಲಾಗಿದೆ. ಪ್ರವಾಸೋದ್ಯಮ ಇಲಾಖೆಯಲ್ಲಿ ಲಭ್ಯವಿರುವ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಬಂಡವಾಳ ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಇಲಾಖೆ ಉದ್ದೇಶಿಸಿದೆ.